doc-137
T-P2

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 27 ಸಂಚಿಕೆ 110 } ಶನಿವಾರ 8—4—44 { ಕಾಲಾಣೆ

ರಹಸ್ಯಾಸ್ತ್ರಗಳು

ಬ್ರಿಟನ್ನಿನ ರಹಸ್ಯಾಸ್ತ್ರಗಳನ್ನು ಕುರಿತು ಬ್ರಿಟಿಷ ಪತ್ರಿಕೆಯೊಂದು ಈ ರೀತಿ ಬರೆದಿದೆ—

ಮುಂದೆ ಯಾವಾಗಲೋ ಉಪಯೋಗಿಸಲಾಗುವುದೆಂದು ಜರ್ಮನರು ತಮ್ಮ ರಹಸ್ಯಾಸ್ತ್ರಗಳ ವಿಷಯವಾಗಿ ವಿಚಿತ್ರವಾದ ಕಥೆಗಳನ್ನು ಹೇಳಿಕೊಳ್ಳುತ್ತಿದ್ದಾರಷ್ಟೆ. ಅದಕ್ಕೆ ಬ್ರಿಟನ್ನಿನ ಯುದ್ಧ ಸಾಮಗ್ರಿಗಳ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿರುವ ಸ್ತ್ರೀ ಪುರುಷರು ತಕ್ಕ ಜವಾಬನ್ನು ಕೊಡುತ್ತಿದ್ದಾರೆ.

ಆ ಉತ್ತರವೇನೆಂದರೆ ಬ್ರಿಟನ್ನು ತಯಾರಿಸುವ ಅತ್ಯಾಧುನಿಕವಾದ ರಹಸ್ಯಾಸ್ತ್ರಗಳು ಕೆಟ್ಟ ಕಥೆಯೆಲ್ಲ. ನಿಜವಾದ ಅಸ್ತ್ರಗಳು.

ಈ ರಹಸ್ಯಾಸ್ತ್ರಗಳ ವಿವರವಾದ ವಿವರ್ಷೆಗಳನ್ನು ಮಾಡುವುದು ಸಾಧ್ಯವಲ್ಲ. ಅದು ಮಿಲಿಟರಿ ರಹಸ್ಯ. ಆದರೆ ಅವುಗಳೇನೆಂದು ಸಾಮಾನ್ಯವಾಗಿ ಹೇಳಬಹುದಾಗಿದೆ-

ಅವು ಏನೆಂದರೆ— ಒಂದು ಬಗೆಯ ಹಡಗು. ಒಂದು ಬಗೆಯ ವಿಮಾನ ಬಾಂಬುಗಳು, ವಿಮಾನ ವಾಹಕಗಳು

ಬ್ರಿಟನ್ನಿನ ಅಡ್ಮಿರ್ಯಾಲಿಟಿಯವರು ಈ ರಹಸ್ಯವಾದ ಹಡಗುಗಳನ್ನು ತಯಾರಿಸಲು ಒಂದು ರಹಸ್ಯ ಕೈಗಾರಿಕೆ ಕೇಂದ್ರವನ್ನು ಕೇಳಿದರು ಇದು ಎರಡು ವರ್ಷಗಳ ಹಿಂದೆ ನಡೆದ ಘಟನೆ.

ಈ ಕಾರ್ಯದಲ್ಲಿ ಕೃತಕಕೃತ್ಯರಾಗಿ ಹದಿನೆಂಟು ತಿಂಗಳುಗಳಾಗುವುದೆಂದು ಊಹೆ ಮಾಡಲಾಯಿತು. ಈ ಕಂಪೆನಿಯ ಮ್ಯಾನೇಜರು ಕೆಲಸಗಾರರನ್ನು ತರೆದು ' ಎಂದೆಂದೂ ನಾವು ಮಾಡದೇ ಇದ್ದ ಯುದ್ಧಸಾಧನವನ್ನೀಗ ಮಾಡಬೇಕಾಗಿದೆ. ನಮ್ಮಲ್ಲಿ ಅದರ ತಯಾರಿಕೆಯ ಸಾಧನಗಳಿಲ್ಲ ನಮಗದರ ಅನುಭವವಿಲ್ಲ. ಹದಿನೆಂಟು ತಿಂಗಳ ಅವಕಾಶವಿದೆ ಅಷ್ಟರಲ್ಲಿ ಮಾಡಿ ಮುಗಿಸಬೇಕಾಗಿದೆ ' ಎಂದು ಹೇಳಿದಂ

ಮೂರು ತಿಂಗಳು ಯಾವ ಆತಂಕವೂ ಇಲ್ಲದೆ ಕೆಲಸ ಮುಂದುವರಿಯಿತು. ಆನಂತರ ಒಂದು ತೊಂದರೆಯು ಉಂಟಾಯಿತು. ಅದು ನಿರ್ಮಾಣ ಕಾರ್ಯಕ್ಕೆ ಸಂಬಂಧಿಸಿದ ಅಧಿಚಣೆಗೆ ಮ್ಯಾನೇಜರೂ ಕೆಲಸಗಾರರೂ ಗಂಟೆಗಂಟೆಗಳ ಕಾಲ ಸಮ್ಯಾಲೋಚನೆ ಮಾಡಿದರು. ಕಡೆಗೆ ಇದರ ನಿವಾರಣೋಪಾಯವು ಕೆಲಸಗಾರರಿಗೆ ಸ್ಫುರಿಸಿತು.

ಎರಡು ದಿನ ಹಗಲೂ ರಾತ್ರಿ ನಿದ್ರೆ ವಿಶ್ರಾಂತಿಗಳಿಲ್ಲದೆ ಕಲೋಚನೆ ಮಾಡಲ್ಪಟ್ಟ ವಿಷಯವು ಅರ್ಧ ಗಂಟೆಯಲ್ಲೇ ನಿರ್ಣಯವಾಯಿತು.

ಒಂಭತ್ತು ತಿಂಗಳಲ್ಲಿ ಕೆಲಸ ತೀರಿತು. ಅಡ್ಮಿರ್ಯಾಲಿಟಿಯು ಫ್ಯಾಕ್ಟರಿಗೆ ಪ್ರಶಂಸಾ ಪತ್ರ ಬರೆಯಿತು.

ಈ ಫ್ಯಾಕ್ಟರಿಯ ಕೆಲಸಗಾರರನ್ನು ಸಂತೋಷ ಪಡಿಸಿ ಅಂಶವೇನೆಂದರೆ— ಅವರು ತಯಾರಿಸಿದ ಯುದ್ಧಾಸ್ತ್ರವು ಅಂತಹ ಸಹಸ್ರಾರು ಅಸ್ತ್ರಗಳ ತಯಾರಿಕೆಗೆ ಸಾಧಕವಾಯಿತು. ಅವು ಒಹಳ ದಿನಗಳು ಕಡಲು ಯುದ್ಧಮಾಡಿ ಕೀರ್ತಿ ಪಡೆದವು. ಶತ್ರು ಕಡಲು ಪಡೆಯ ಧಾಳಿಯನ್ನೂ ಯು ಬೋಟುಗಳ ಅಟಾಂತರವನ್ನೂ ತಡೆಯಲು ಇದು ಬಹು ಮಟ್ಟಿಗೆ ಸಹಾಯಕವಾಯಿತು.

ವಾಯುದಳ ಸಾಮಗ್ರಿಗಳ ತಯಾರಿಕಾ ಕೇಂದ್ರದವರು ತಮ್ಮ ಕಛೇರಿಯಲ್ಲಿಯೇ ಕುಳಿತು ಅತ್ಯಪಾಯಕಾವಿಗಳಾದ ಅನೇಕ ಬಗೆಯ ಬಾಂಬುಗಳ ತಯಾರಿಕೆಯ ವಿಧಾನವನ್ನು ನಿರ್ಣಯಿಸಿದರು.

ಈ ವಿಧವಾದ ಬಾಂಬುಗಳೇ ಜರ್ಮನರನ್ನು ಉಡುಗಿಸಿದವು. ಅವರ ಬ್ಲೀಷ್ ಕ್ರೀಗ್ ಶಬ್ದವನ್ನು ಉಚ್ಚರಿಸದಂತೆ ಮಾಡಿಬಿಟ್ಟರು.

ತಿದ್ದುಪಡಿ

ನಿನ್ನೆ ಮತ್ತು ಮೊನ್ನೆಯ ದಿನಪತ್ರಿಕೆಗಳಲ್ಲಿ ' ವಾಣಿ ' ಜಾಹಿರಾತಿನಲ್ಲಿ ಶ್ರೀ ಹಿರಣ್ಣಯ್ಯನವರ ಅಶ್ಲೀಲವಾದ ಹಾಸ್ಯ ಎಂದು ತಪ್ಪಾಗಿ ಪ್ರಿಂಟಾಗಿರುತ್ತದೆ. ಇದನ್ನು ಶ್ರೀ ಹಿರಣ್ಣಯ್ಯನವರ ಅಶ್ಲೀಲರಹಿತವಾದ ಹಾಸ್ಯವೆಂದು ತಿದ್ದಿಕೊಳ್ಳಬೇಕಾಗಿ ಕೋರುತ್ತೇವೆ-

ಮ್ಯಾನೇಜರ

ಹಿಂದೂಸ್ಥಾನದಲ್ಲಿ ಕಾಮುಕ ಬೀತಿ

ಎಮೆರಿಯವರ ಕಳವಳ

ನಾಜೀ ವೈದ್ಯರ ಸಂಘಕ್ಕೆ ಸೇರುವುದಿಲ್ಲವೆಂದು ಹಾಲೆಂಡಿನ 600 ಮಂದಿ ವೈದ್ಯರು ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು.

ಯೂರೋಪಿನಲ್ಲಿರುವ ಸಾಲೆರ್ನೋ ವಿಶ್ವವಿದ್ಯಾಲಯವು 1100 ವರ್ಷದ ಪುರಾತನವಾದುದಂತೆ.

ವಿಂಡಲ್ ವಿಲ್ಕಿಯವರು ಈಗಿನಂತೆಯೇ ರಿಕಾದ ವಿದೇಶಾಂಗ ನೀತಿಯ ಬಗ್ಗೆ ತಮ್ಮ ಅಸಮ್ಮತಿಯನ್ನು ತೋರಿಸಿರುವರು.

ಜರ್ಮನಿಯ ಪತನಕ್ಕೆ ಪ್ರಪಂಚವು ಪರ್ಯಾದ ಕಡೆ ನೋಡುತ್ತಿರುವುದು.

ರಾಮಲೀಲಾ ಕಮಿಟಿಯನ್ನು ನನ್ನ ಅಪೇಕ್ಷೆಯ ಮೇಲೆ ಮಹಾಜನರು ಏರ್ಪಡಿಸಿದರು. ನನ್ನ ಅನುಮತಿಯ ಪ್ರಕಾರ ಅದು ಕೆಲಸಮಾಡುವುದು. ಈ ವರ್ಷ 50 ಸಾವಿರ ರೂಪಾಯಿ ಚಂದಾವನ್ನು ಅದು ವಸೂಲ್ಮಾಡುವುದು. ಅದನ್ನು ನಾನು ನನ್ನ ಮನಸ್ಸು ಬಂದಂತೆ ವಿನಿಯೋಗ ಮಾಡಬಹುದು. ನನ್ನ ಮಂದಿರಸಲ್ಲಿ ರಾಮಲೀಲೆ ಉತ್ಸವವನ್ನು ಮಾಡಬಾರದೆಂದು ನಾನು ಹೇಳಬಹುದು. ಜನರು ಇನ್ನೆಲ್ಲೂ ಮಾಡದಿರುವ ಹಾಗೆ ಮಾಡಲು ನನಗೆ ಅಧಿಕಾರವಿನ್ನೆ, ಎಂದು ಲೂಡಿಯಾನ ಮಹಾಂತರು ಕೋರ್ಟಿನಲ್ಲಿ ಸಾಕ್ಷಿ ನುಡಿದರು. ಮಹಂತರೇ, ಇದು 1944 ನೇ ಸಂವತ್ಸರ!

ಈ ವರ್ಷ ಹಿಂದೂಸ್ಥಾನದಲ್ಲಿ ಕ್ಷಾಮವು ಪ್ರಾಪ್ತವಾಗದಂತೆ ಪ್ರಾಂತೀಯ ಸರಕಾರಗಳೂ ಕೇಂದ್ರ ಸರಕಾರವೂ ಕಲೆತು ಬೇಕಾದ ರೀತಿನೀತಿಗಳನ್ನು ಕೈಗೊಂಡಿದ್ದರೂ ಕೂಡ ಈಗಾಗಲೇ ಪರಿಸ್ಥಿತಿಯು ಪ್ರತಿಕೂಲವಾಗಿರುವಂತೆ ಮುಂಡಿಯೂ ಮುಳೆಯು ಸಕಾಲಗಳಲ್ಲಿ ನಡೆಯದೆ ಹೋಗುವ ಭೀತಿ ಇದೆಯೆಂದೂ ಹಾಗೇನಾದರೂ ಸಕಾಲದಲ್ಲಿ ಮಳೆಗೆಳು ನಡೆಯದೆ ಹೋದರೆ ಕ್ಷಾಮವು ಪ್ರಾಪ್ತವಾಗಬಹುದೆಂದೂ ಎಮೆರಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಕಾಚಾರ' ಮತ್ತು ಮಣಿಪುರದ ಮೇಲೆ ನೇ ತಾರೀಖಿನಲ್ಲಿ ಚಿಕ್ಕದೊಂದು ಶತ್ರು ವಿಮಾನ ಧಾಳಿ ನಡೆದು ಕೆಲ ಬಾಂಬುಗಳು ಹಾಕಿದರು.

ಮದ್ರಾಸಿನಲ್ಲಿ ಮಿಸೆಸ್ ಹೆನ್ರಿಕ್ಕನ್ನು ಎಂಬಳು ವೇಶ್ಯಾಗೃಹ ನಡೆಸುತ್ತಿದ್ದಳೆಂಬ ಆಪಾದನೆ ಮೇಲೆ 500 ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ.

ಕಾನಪೂರ ಜಿಲ್ಲೆಯಲ್ಲಿ 2 ವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಜರುಗಿಸಲಿರುವ ಮಹಾ ಯಜ್ಞವನ್ನು ಆ ಜಿಲ್ಲೆಯ ತರುಣ ಸಂಘಗಳೆಲ್ಲವೂ ಅಂತಹ ಯಜ್ಞಗಳು ಅನಾಗರಿಕವೆಂದು ಜೋಳಿಗೆ ಪ್ರತಿಭಟಿಸಿ ಬೊಡ ಆಂದೋಳನವನ್ನು ಜರುಗಿಸಿರುವರು.

Opera — ಅಪೆರಾ ಟಾಕೀಸ್

8—4—44 ರಿಂದ — — ಪ್ರತಿ ದಿನ 3 ಆಟಗಳು

ಮಾರ್ಕ್ ಆಫ್ ಜೋರೋ

ಟರೊನ್ ಪವರ್ ಮತ್ತು ಲಿಂಡಾ ಡಾರ್ನೆಲ್ ಪಾತ್ರ ವಹಿಸಿರುವರು

(ಇಂಗ್ಲೀಷ್ ಭಾಷೆ)

ತಾ. 13 – 4 – 44 ರಿಂದ

ಕೆ. ಯು. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಪಾಪನಾಶಂ ಶಿವನ್

ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ ಪಾತ್ರವಹಿಸಿರುವ

ಕುಬೇರಕುಚೇಲ

RANJIT — **3 nd Week**

TANSEN

ರಣಜಿತ್ ಟಾಕೀಸ್ .... ನೇ ಯಶಸ್ವಿ ವಾರ

ತಾನ್‌ಸೇನ್

ಸೈಗಾಲ್, ಕುರ್ಷಿದ್, ಮುಬಾರಕ್ ಅಭಿನಯ

ನಿಮಗೆ ಗೊತ್ತೇ ?.....

ಮನುಷ್ಯನ ಜ್ಞಾಪಕ ಶಕ್ತಿಯು 11 ರಿಂದ 14 ವರ್ಷದಲ್ಲಿ ಚೆನ್ನಾಗಿರುತ್ತಂತೆ,

ಮನುಷ್ಯನ ಒಲಗೈ ಉಗುರು ಎಡಗೈ ಉಗುರಿಗಿಂತ ವೇಗನೆ ಬೆಳೆಯುವ ದೆಂದು ಗೊತ್ತಾಗಿದೆ.

ಯುದ್ಧ ಮುಗಿದನಂತರ ಜನರ (ಪ್ರಯಾಣೀಕರ) ಉಪಯೋಗಕ್ಕೆ ಭಾರಿ ವಿಮಾನಗಳು ತಯಾರಾಗುವುವು. ಇವು 300 ಮೈಲಿ ವೇಗದಲ್ಲಿ ಹಿಡಾಡಬಲ್ಲದಂತೆ. ಭೂಮಿಯು ನೋಲೆ ಇರುವವರ ಸಂಗಡ ಮಾತನಾಡಲು ಟೆಲಿಫೋನೂ, ಟೆಲಿಗ್ರಾಫ್ ಕಳಿಸಲು ಸೂಪರ್‌ಹೈಡೂ ಇರುವುದಂತೆ,

ಜೇನುಮೇಣವನ್ನು ಯಾವ ಪದಾರ್ಥಗಳಿಗೂ ಸಮ ಎಲ್ಲಿಗೆ ಬೇಕಾದರೂ ತೆಗೆದುಕೊಂಡುಹೋದರೂ ಆ ಪದಾರ್ಥ ಕೆಡುವುದಿಲ್ಲವಂತೆ.

ಒಂದು ಟಾರ್ಪೆಡೋ 3000 ಪೌಂಡು ತೂಕವಿರುತ್ತದೆ. ಆದರಲ್ಲಿ 500 ಬೇರೆಬೇರೆ ಭಾಗಗಳಿರುತ್ತವೆ, ಒಂದಕ್ಕೆ 40 ಸಾವಿರ ರೂಪಾಯಿ ಕ್ರಯ !

ಅಮೇರಿಕಾ ಸಂಯುಕ್ತ ಸಂಸ್ಥಾನದವರು ತಮ್ಮ ನೌಕೆಗಳಿಗೆ ನಾಮಕರಣ ಮಾಡುವಾಗ, ಯುದ್ಧ ಹಡಗುಗಳಿಗೆ ಡಿಸ್ಟ್ರಾಕ್ಟ್‌ಗಳ ಹೆಸರನ್ನಿಡುವರು, ಕ್ರೂಜರಿಗೆ ಪಟ್ಟಣಗಳ ಹೆಸರನ್ನಿಡುವರು, ಡಿಸ್ಟ್ರಾಯರುಗಳಿಗೆ ನೌಕಾ ಅಧಿಕಾರಿಗಳ ಹೆಸರನ್ನಿಡುವರು, ಸಬ್ ವೇರೀನಿಗೆ ಮೀನಿನ ಹೆಸರನ್ನಿಡುವರು, ವಿಮಾನ ಹೊರುವ ನೌಕೆಗಳಿಗೆ ಯುದ್ಧಗಳಲ್ಲಿ ಪೂರ್ವದಲ್ಲಿ ಹೆಸರುಪಡೆದ ನೌಕೆಗಳ ಹೆಸರನ್ನಿಡುವರು.

Edited, Printed & published by M. S. Krishna Rao at the Satyavadi Press. Chamaraja Agrahar, Mysore.

!! — ಇದೇ ಮಹಾ ನುದಿನ — !!

ಮೈಸೂರಿನ ಪ್ರಜೆಗಳಿಗೆ ಕಣ್ಣಿನಾನಂದ ! ಸಂಗೀತಕಲಾವಿದರಿಗೆ ಕರ್ಣಾನಂದ !!

ಸಮಾಜ ದ್ರೋಹವನ್ನು ಖಂಡಿಸಿದೆ — ಸಂಗೀತದ ಸೊಬಗನ್ನು ಸಾರಿದೆ — ಸರಳ ಜೀವನದ ಶ್ರೇಷ್ಠತೆಯನ್ನು ತಿಳಿಸಿದೆ !

VANI

ವಾಣಿ

.... ಹೆಚ್. ಆರ್. ಬಿ. ಸಿ. ಮತ್ತು ಟಿ. ಎಸ್. ಶಿವಬಸವಸ್ವಾಮಿಯವರ ಕಲಾದೇವತೆಯ ಅಮೋಘ ಸೇವೆ. ....

ಹಿರಣ್ಣಯ್ಯನವರ ಅಶ್ಲೀಲರಹಿತವಾದ ಹಾಸ್ಯ

ಚೌಡಯ್ಯನವರ ಆಕರ್ಷಣೀಯ ಪಿಟೀಲು ವಾದನ

ಧನಭಾಗ್ಯಂ ಮತ್ತು ಮಹದೇವನ್‌ರ ಶಿವನೃತ್ಯ

ಚಂಪೆ ವೈದ್ಯನಾಥ ಭಾಗವತರ ಸುಶ್ರಾವ್ಯ ಸಂಗೀತ !

ಬಳ್ಳಾರಿ ಲಲಿತ, ಶಾಂತಕುಮಾರಿ, ಮೂರ್ತಿಯರ ಅಭಿನಯ

6 – 4 – 44 ರಿಂದ

ಬೆಂಗಳೂರು
ಮೂವಿಲ್ಯಾಂಡ್ ಟಾಕೀಸಿನಲ್ಲಿ
ಪ್ರತಿ ದಿನ ೪ ಆಟಗಳು

ಮೈಸೂರು
ಚಾಮುಂಡೇಶ್ವರಿ ಟಾಕೀಸಿನಲ್ಲಿ
ಪ್ರತಿ ದಿನ ೩ ಆಟಗಳು

ಈ ಸುಂದರ ಸಾಮಾಜಿಕ ಚಿತ್ರವನ್ನು

ತಪ್ಪದೇ ನೋಡಿ

Shree Bhramaramba Picture Circuit Release